ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

# ಸಿ.ಸಿ.ಸಂಖ್ಯೆಃ 72/2019

ಸಾಕ್ಷಿಯನ್ನು ದಿಃ **14.07.2022** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | ಅಪ್ಪಣ್ಣ | ಸಿಡಬ್ಲ್ಯೂಃ **4** | ಪಿಡಬ್ಲ್ಯೂಃ **4** |
| ತಂದೆ/ಗಂಡನ ಹೆಸರು | ರಾಮಯ್ಯ | | |
| ವಯಸ್ಸು | 58 ವರ್ಷ | | |
| ಕೆಲಸ | ವ್ಯವಸಾಯ | | |
| ವಾಸಸ್ಥಳ | ಹುಣಸೂರು | | |

ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನನಗೆ ಕಿರಣ, ವಿನೋದ ಮತ್ತು ಸಂದೀಪ ಗೊತ್ತಿಲ್ಲ. ಪೊಲೀಸರು ಮಹಜರ್ ಸಮಯದಲ್ಲಿ ನನ್ನನ್ನು 3 ವರ್ಷದ ಹಿಂದೆ ಹುಣಸೂರು ಪಟ್ಟಣ ಪೊಲೀಸರು ಠಾಣೆಗೆ ಕರೆದಿದ್ದರು. ಆ ಸಮಯದಲ್ಲಿ 2 ರಾಡು ಮತ್ತು 1 ಆಕ್ಟೀವಾ ಹೊಂಡಾ ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದರು. 3,000/- ರಿಂದ 4,000/- ಹಣ, 2 ಮೊಬೈಲ್ ತೋರಿಸಿ ಅದು ಕಳ್ಳತನದ ವಸ್ತುಗಳು ಎಂದು ಹೇಳಿ ನನ್ನಿಂದ ಸಹಿ ಪಡೆದಿರುತ್ತಾರೆ . ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ.

ಅಮಾನತ್ತು ಮಹಜರ್ ನಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಅಮಾನತ್ತು ಮಹಜರ್ ನ ದೃಢೀಕೃತ ನಕಲನ್ನು ಈಗಾಗಲೆ ನಿಪಿ.2 ಎಂದು ಗುರುತಿಸಲಾಗಿದೆ.

ನ್ಯಾಯಾಲಯದ ಮುಂದಿರುವ 2 ರಾಡುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ. 1 ಮತ್ತು 2 ಎಂದು ಗುರುತಿಸಲಾಯಿತು. (ಸದರಿ ಮು.ಮಾ.ಗಳನ್ನು ಸಿ.ಅರ್ 384/18ರ ಪ್ರಕರಣದಲ್ಲಿ ಮೂಲತಃ ಅಮಾನತ್ತು ಪಡಿಸಿಕೊಂಡು ಸದರಿ ಪ್ರಕರಣದಲ್ಲೆ ಇರಿಸಿದ್ದು ಗುರುತಿಸುವ ಸಲುವಾಗಿ ಈ ಪ್ರಕರಣದಲ್ಲಿ ಹಾಜರು ಪಡಿಸಲಾಗಿದೆ.).

ದ್ವಿಚಕ್ರ ವಾಹನ ನೋಡಿದರೆ ಗುರುತಿಸುತ್ತೇನೆ, ಅದರ ಫೋಟೋ ಅಥವಾ ವಾಹನವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಆದ್ದರಿಂದ ಅವುಗಳನ್ನು ನಿಶಾನೆಗೊಳಪಡಿಸಿಲ್ಲ. ಹಣವನ್ನು ನೋಡಿದರೆ ಗುರುತಿಸುತ್ತೇನೆ, ಅದರ ಫೋಟೋ ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಆದ್ದರಿಂದ ಅವುಗಳನ್ನು ನಿಶಾನೆಗೊಳಪಡಿಸಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಹಾಗೂ ವಿ.ಸಿ ಮೂಲಕ ಹಾಜರು ಪಡಿಸಿದ 3 ನೇ ಆರೋಪಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ನನ್ನ ಸಮಕ್ಷಮ ಪೊಲೀಸರು ಆರೋಪಿಗಳ ಕಡೆಯಿಂದ ಪೊಲೀಸರು ಯಾವುದೇ ವಸ್ತುಗಳನ್ನು ಹಾಜರುಪಡಿಸಿಕೊಂಡಿಲ್ಲ. ನಿಪಿ.2 ರಲ್ಲಿ ಈಗ ಹೇಳಿದ್ದನ್ನು ಬಿಟ್ಟು ಬೇರೆ ಏನು ಬರೆದಿರುತ್ತಾರೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)

<u>ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ</u>

ದಿಃ 06.02.2018 ರಂದು ಪೊಲೀಸರು ನನ್ನನ್ನು ಠಾಣೆಗೆ ಬರಮಾಡಿಕೊಂಡಿದ್ದರು ಎಂದರೆ ಸರಿ. ಆ ಸಮಯದಲ್ಲಿ ಠಾಣೆಯಲ್ಲಿ ಸಂದೀಪ , ಕಿರಣ ಮತ್ತು ವಿನೋದ ಎಂಬ 3 ಜನ ಆರೋಪಿತರಿದ್ದರು ಎಂದರೆ ಸರಿಯಲ್ಲ. ಆಗ ಪೊಲೀಸರು ನನ್ನನ್ನು ಮತ್ತು ರೇವಣ್ಣ ಅವರನ್ನು ಪಂಚರನ್ನಾಗಿ ಬರಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ಸಮಕ್ಷಮ ಆರೋಪಿತ ವಶದಿಂದ ಕೆಎ–11 1783 ನಕಲಪಿ ಬೋರ್ಡ್ ಹಾಕಿರುವ ಆಕ್ಟೀವಾ ಹೊಂಡಾ ವಾಹನವನ್ನು ವಶಪಡಿಸಿಕೊಂಡರು ಎಂದರೆ ಸರಿಯಲ್ಲ.ಸದರಿ ವಾಹನದ ಮೂಲ ಸಂ.ಕೆಎ–32 ಇಪಿ 2953 ಆಗಿರುತ್ತದೆ ಎಂದರೆ ಗೊತ್ತಿಲ್ಲ. ಅದೇ ಸಮಯದಲ್ಲಿ ಸದರಿ ಸ್ಕೂಟರ್ ನ ಎರಡು ಕೀಗಳನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ. ಸದರಿ

ಆಕ್ಟೀವಾ ಹೋಂಡಾಸೀಟ್ ನ ಒಳಗೆ ಇದ್ದ 2 ರಾಡುಗಳನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ನಂತರ ಆರೋಪಿ ಕಿರಣ ರವರ ವಶದಿಂದ ಒಂದು ಬಿಳಿ ಮತ್ತು ಗೋಲ್ಡನ್ ಬಣ್ಣದ ಒಪ್ಪೋ ಮೊಬೈಲ್ ಮತ್ತು 500 ರೂ.ಗಳ 4 ನೋಟುಗಳನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿ ವಿನೋದ ವಶದಿಂದ ಒಂದು ಗೋಲ್ಡನ್ ಬಣ್ಣದ ಒಪ್ಪೋ ಮೊಬೈಲ್ ಮತ್ತು 500 ರೂ.ಗಳ 3 ನೋಟುಗಳನ್ನು , 200/ ರೂ. ಒಂದು ನೋಟ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ .

ಅದೇ ರೀತಿ ಆರೋಪಿ ಸಂದೀಪ ವಶದಿಂದ 500 ರೂ.ಗಳ 2 ನೋಟುಗಳನ್ನು , 100/ ರೂ. ಒಂದು ನೋಟು , 20/-ರೂ.ಗಳ 100 ನೋಟುಗಳನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ನಿ.ಪಿ.2 ಅನ್ನು ನಾನು ಓದಿದ ನಂತರ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಇದಕ್ಕೆ ಸಂಬಂಧಪಟ್ಟಂತೆ ನಾನು ದಿಃ 02.06.2018 ರಂದು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ನಕಲು ಪ್ರತಿಯಾಗಿದ್ದರಿಂದ ಅದನ್ನು ನಿಶಾನೆಯಾಗಿ ಗುರುತಿಸಲು ಮಾನ್ಯ ಎಎಪಿ ರವರ ಕೋರಿಕೆಯನ್ನು ತಿರಸ್ಕರಿಸಲಾಯಿತು. ನನ್ನ ಸಮಕ್ಷಮ 3 ಜನ ಆರೋಪಿತರ ವಶದಿಂದ 3 ಮೊಬೈಲ್, ಹಣ, ರಾಡು ಮತ್ತು ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡರು ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರು ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಎಮ್ ಇ ಎಮ್ ವಕೀಲರಿಂದ –**

ನಾನು ವ್ಯವಸಾಯದ ಜೊತೆಗೆ ಸಮಾಜ ಸೇವೆ ಕೂಡ ಮಾಡುತ್ತೇನೆ ಎಂದರೆ ಸರಿ. ಸಮಾಜ ಸೇವೆ ಮಾಡುವ ಸಮಯದಲ್ಲಿ ಹುಣಸೂರು ಮತ್ತು ಗ್ರಾಮಾಂತರ ಠಾಣೆಗಳಿಗೆ ಹೋಗುತ್ತೇನೆ ಎಂದರೆ ಸರಿ. ಮಹಜರ್ ಸಮಯದಲ್ಲಿ ಪೊಲೀಸರು ನನಗೆ ನೋಟೀಸ್ ನೀಡಿರಲಿಲ್ಲ. ನನ್ನ ಸಮಕ್ಷಮ ಆರೋಪಿತರ ವಶದಿಂದ ಯಾವುದೇ ಕೀ ಮತ್ತು ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿಲ್ಲ ಸರಿ. ಈ ಪ್ರಕರಣದ ಬಗ್ಗೆ ನನಗೆ ಏನು ಮಾಹಿತಿ ಇಲ್ಲ ಎಂದರೆ ಸರಿ.

**3 ನೇ ಆರೋಪಿಪರ ವಕೀಲರಾದ ಶ್ರೀಮತಿ ಜೆ.ಪಿ ಅವರನ್ನು ಕೂಗಿಕರೆಯಿಸಲಾಗಿ ಗೈರುಹಾಜರಿದ್ದು , 3 ನೇ ಆರೋಪಿತರು 1 ಮತ್ತು 4 ನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀಸವಾಲನ್ನು ಅನುಮೋದಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.